ಪಶು ಚಿಕಿತ್ಸಾಲಯದ ಬಗ್ಗೆ

38(307): ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಪಶು ಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಎರಡು ವರ್ಷದ ಅವಧಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಜಾನುವಾರುಗಳ ಗಣತಿ ಮಾಡಲಾಗಿದೆಯೇ? (ವಿವರ ನೀಡುವುದು);

ಆ) ಬೀದರ್ ಜಿಲ್ಲೆಯಲ್ಲಿ ಇರುವ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಎಷ್ಟು ಪಶು ಆಸ್ಪತ್ರೆಗಳ ಅವಶ್ಯಕತೆ ಇದೆ ಹಾಗೂ ಈಗ ಜಿಲ್ಲೆಯಲ್ಲಿರುವ ಪಶು ಚಿಕಿತ್ಸಾಲಯಗಳು ಮತ್ತು ಆಸ್ಪತ್ರೆಗಳ ಸಂಖ್ಯೆ ಎಷ್ಟು? (ಆಸ್ಪತ್ರೆವಾರು ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಇ) ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸದಾಗಿ ಪಶು ಚಿಕಿತ್ಸಾಲಯ/ಆಸ್ಪತ್ರೆಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಈ ಪೈಕಿ ಎಷ್ಟು ಹೊಸ ಆಸ್ಪತ್ರೆ / ಚಿಕಿತ್ಸಾಲಯಗಳನ್ನು ಭಾಲ್ಕಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗುವುದು? (ಪೂರ್ಣ ವಿರಗಳನ್ನು ಒದಗಿಸುವುದು);

ಈ) ಕಳೆದ ಎರಡು ವರ್ಷಗಳ ಅವಧಿಯಲ್ಲಿ ಜಿಲ್ಲೆಯ ಯಾವ ಯಾವ ಪಶು ಆಸ್ಪತ್ರೆ ಹಾಗೂ ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ ಹಾಗೂ ಇವುಗಳ ನಿರ್ವಹಣೆಗಾಗಿ ಸರ್ಕಾರ ಈ ಅವಧಿಯಲ್ಲಿ ಎಷ್ಟು ಹಣವನ್ನು ವೆಚ್ಚ ಮಾಡಿದೆ; ಪ್ರಸಕ್ತ ಸಾಲಿನಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಯಾವ ಯಾವ ಕಾರ್ಯಗಳಿಗೆ ವೆಚ್ಚ ಮಾಡಲು ನಿರ್ಧರಿಸಿದೆ?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು):

ಅ) ಮಾಡಿರುವುದಿಲ್ಲ.

ಆ) 2007ರ ಜಾನುವಾರು ಗಣತಿಯನ್ವಯ ಬೀದರ್ ಜಿಲ್ಲೆಯಲ್ಲಿ ಒಟ್ಟು 4,86,944 ಜಾನುವಾರು ಘಟಕಗಳಿದ್ದು, ಕೃಷಿ ಆಯೋಗದ ಶಿಫಾರಸ್ಸಿನ ಅನ್ವಯ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದರಂತೆ

ಪಶುವೈದ್ಯಕೀಯ ಸಂಸ್ಥೆ ಮಂಜೂರು ಮಾಡಬಹುದಾಗಿದೆ. ಇದರನ್ವಯ ಬೀದರ್ ಜಿಲ್ಲೆಯಲ್ಲಿ 96 ಪಶುವೈದ್ಯಕೀಯ ಸಂಸ್ಥೆಗಳಿರಬೇಕಾಗಿದ್ದು, ಹಾಲಿ 113 ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು, 17 ಪಶು ವೈದ್ಯಕೀಯ ಸಂಸ್ಥೆಗಳು ಹೆಚ್ಚು ವರಿಯಾಗಿರುತ್ತದೆ.

ವಿಧಾನ ಸಭಾ ಕ್ಷೇತ್ರವಾರು ಪಶುವೈದ್ಯಕೀಯ ಸಂಸ್ಥೆಗಳ ವಿವರಗಳನ್ನು ಅನುಬಂಧ– 1 ರಲ್ಲಿ ನೀಡಿದೆ.

ಇ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ಪಶುಚಿಕಿತ್ಸಾಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಕಳೆದ ಎರಡು ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಯಾವುದೇ ಪಶುವೈದ್ಯಕೀಯ ಸಂಸ್ಥೆಗಳನ್ನು ಮೇಲ್ದರ್ಜೆಗೆ ಏರಿಸಿರುವುದಿಲ್ಲ. ಆದಕಾರಣ ವಿವರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ- 1

ಬೀದರ್ ಜಿಲ್ಲೆಯ ಕ್ಷೇತ್ರವಾರು, ಪಶು ವೈದ್ಯಕೀಯ ಸಂಸ್ಥೆಗಳ ಪಟ್ಟಿ

ಕ್ರ.ಸಂ.	47.ಬಸವಕಲ್ಯಾಣ ಕ್ಷೇತ್ರ ಪ.ಆ/ಪ.ಚಿ	48- ಹುಮನಾಬಾದ ಕ್ಷೇತ್ರ ಪ.ಆ/ಪ.ಚಿ	49- ಬೀದರ್ ದಕ್ಷಿಣ ಕ್ಷೇತ್ರ ಪ.ಆ/ಪ.ಚಿ	50-ಬೀದರ್ ಕ್ಷೇತ್ರ ಪ.ಆ/ಪ.ಚಿ ಪ್ರ.ಗಾ.ಯೋ	51- ಭಾಲ್ಕಿ ಕ್ಷೇತ್ರ ಪ.ಆ/ಪ.ಚಿ	52- ಔರಾದ್ ಕ್ಷೇತ್ರ ಪ.ಆ/ಪ.ಚಿ
1.	ಪ.ಆ.ಬಸವಕಲ್ಯಾಣ	ಪ.ಆ.ಹುಮನಾಬಾದ್	ಬಕ್ಕಚೌಡಿ	ಪ.ಆ.ಬೀದರ್	ಪ.ಆ ಭಾಲ್ಕಿ	ಪ.ಆ.ಔರಾದ
2.	ಪ.ಆ.ಹುಲಸೂರ	ಪ.ಆ ಚಿಟಗುಪ್ಪಾ	ಅಸ್ಪೂರ	ಯರನಳ್ಳಿ	ಪ.ಆ.ನಿಟ್ಟೂರ	ಕಮಲನಗರ
3.	ಮೀರಖಲ್	ಚಂದನಹಳ್ಳೀ	ಸಂಗೋಳಗಿ	ಶ್ರೀಮಂಡಳ್	ಲಖನಗಾಂವ್	ಠಾಣಾಕುಶನೂರ್
4.	ಗಡಿಗೌಡಗಾಂವ್	ಘಾಟಬೋರಾಳ	ಕಮಠಾಣಾ	ಅಲಿಯಂಬರ	ಭಾತಂಬ್ರಾ	ಸಂತಪೂರ
5.	ಬೇಲೂರ	ರಾಜೋಳಾ	ಚಿಟ್ಟಾ	ಆನವಾಡಾ	ಮೇಹಕರ್	ಹೆಡಗಾಪೂರ
7.	ಉಜಳಂಬ	ದುಬಲಗುಂಡಿ	ರಂಜೋಳಖೇಣಿ	ಮರಕಲ್	ಮೋರಂಬಿ	ಮುಧೋಳ(ಬಿ)
8.	ಭೋಸಗಾ	ಸೇಡೋಳಾ	ಸಿರ್ಸಿ(ಜೆ)	ಮಾಳೆಗಾಂವ್	ದಾಡಗಿ	ಸಂಗಮ್
9.	ಹಾರಕೂಡ	ಕನಕಟ್ಟಾ	ಯಾಕತಪೂರಾ	ಗಾದಗಿ	ಕೋನಮೇಳಕುಂದಾ	ಚಿಂತಾಕಿ
10.	ಕೋಹಿನೂರ	ರಾಜೇಶ್ವರಿ	ಬದಗಲ್		ಹಲಬರ್ಗಾ	ಕೌಡಗಾಂವ್
11	ಲಾಡವಂತಿ	ಹುಡಗಿ	ಮನ್ನಳ್ಳಿ		ಬ್ಯಾಲಹಳ್ಳಿ	ಖೇರ್ಡಾ
12.	ಬೆಟಗೇರಾ	ಮದರಗಾಂವ್	ಬರೂರ		ಜ್ಯಾಂತಿ	ತೊರಣಾ
13.	ಮೋಖಂಡಿ	ನಿಂಬೂರ	ಮನ್ನಾಎಖೇಳ್ಳಿ		ಧನ್ನೂರಾ	ಧೂಪತಮಹಾಗಾಂವ್
14.	ಮಂಠಾಳ	ತಾಳಮಡಗಿ	ಬೇಮಳಖೇಡಾ		ಕಣಜಿ	ಡೋಣಗಾಂವ್
15.	ಮುಡಬಿ	ಕಲ್ಲೂರ	ನಿರ್ಣಾ		ಖಟಕಚಿಂಚೋಳಿ	ವಡಗಾಂವ್

16.	ಹಿರೇಗಾಂವ್	ಹಳ್ಳಿಖೇಡ(ಕೆ)	ಮುತ್ತಂಗಿ		ಬಾಳೂರ	ರಾಮಸೇವನಾಯ್ಕ ತಾಂಡಾ
17.	ಹಾಮುನಗರ	ಇಟಗಾ	ಕನಕಟ್ಟಾ		ಲಾಧಾ	ಬೆಳಕೂಣಿ(ಚೌ)
18.		ಕೊಡಂಬಲ್	ಚಾಂಗಲೇರಾ		ವರವಟ್ಟಿ	ಸುಂಧಾಳ
19.		ಮುಸ್ತರಿ	ಮದರಗಿ		ಡಾವರಗಾಂವ್	ಸೋನಾಳ
20					ಮಳಚಾಪೂರ	
21.					ಎಣಕೂರ	
22.					ಮದಕಟ್ಟಿ	
23.					ಡೋಣಗಾಪೂರ	
	ಪ.ಆ– 2 ಪ.ಚಿ.– 15	ಪ.ಆ.– 2 ಪ.ಚಿ.– 14 ಕೆ.ವಿ.ಎಸ್– 1 ಕೆವಿಎಸ್' ಉಕೇ □ 1 ಕೃಗಭಕೇ– 1	ಪ.ಚಿ. – 17 ಪ್ರಾಪಚಿ– 1 ಕೆ.ವಿ.ಎಸ್ ಉಕೇ– 1	ಪ.ಆ.– 1 ಪ.ಚಿ.– 4 ಪ್ರಾಪಚಿ– 2 ಕೆ.ವಿ.ಎಸ್ ಉಕೇ– 2	ಪ.ಆ.– 2 ಪ.ಚಿ.– 15 ಪ್ರಾಪಚಿ– 6	ಪ.ಆ.– 1 ಪ.ಚಿ.– 17 ಪ್ರಾಪಚಿ– 1

ವಿ.ಸೂ. :– ಪ್ರತಿ ತಾಲ್ಲೂಕಿಗೆ ಒಂದರಂತೆ ಸಂಚಾರಿ ಪಶು ಚಿಕಿತ್ಸಾಲಯ ಕಾರ್ಯ ನಿರ್ವಹಿಸುತ್ತಿದೆ.